## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರ ಶೂನ್ಯ ವೇಳೆಯ ಪ್ರಸ್ತಾವನೆಗೆ ಉತ್ತರ ಒದಗಿಸುವ ಕುರಿತು.

**ಪ್ರಶ್ನೆ:**

ದಿನಾಂಕ: 27-12-2023 ರಂದು ಶ್ರೀ. ಲವಿ, ವಯಸ್ಸು 24 ವರ್ಷ, ಪಸಪುಲ್ ಗ್ರಾಮ, ಗುರುಮಿಟ್ಕಲ್ ತಾಲ್ಲೂಕು, ಯಾದಗಿರಿ ಜಿಲ್ಲೆ ಈ ಯುವಕನ ಅಪಹರಣವಾಗಿದ್ದು ದಿನಾಂಕ: 30-12-2023 ರಂದು ಈ ಬಗ್ಗೆ ಗುರುಮಿಟ್ಕಲ್ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿರುತ್ತದೆ ಇವತ್ತಿಗೆ ಎರಡು ತಿಂಗಳಾದರೂ ಅಪಹರಣವಾದ ವ್ಯಕ್ತಿಯನ್ನು ಇನ್ನೂ ಪತ್ತೆ ಹಚ್ಚದಿರುವ ಮತ್ತು ಈ ಕೃತ್ಯದಲ್ಲಿ ಭಾಗಿಯಾದವರನ್ನು ಬಂಧಿಸದೆ ಇರುವ ಕುರಿತು.

**ಉತ್ತರ:**

ಶ್ರೀ ಕಾಳಪ್ಪ ತಂದೆ ಮೋನಪ್ಪ ಕಂಬಾರ, 25 ವರ್ಷ ರವರು ದಿನಾಂಕ:30/12/2023 ರಂದು 15:00 ಗಂಟೆಗೆ ಗುರುಮಿಟ್ಕಲ್ ಠಾಣೆಗೆ ಹಾಜರಾಗಿ ಸಲ್ಲಿಸಿದ ದೂರಿನ ಸಾರಾಂಶ ಈ ಕೆಳಗಿನಂತಿದೆ.

ದಿನಾಂಕ:27/12/2023 ರಂದು ಬೆಳಗ್ಗೆ 7:00 ಗಂಟೆ ಸುಮಾರಿಗೆ ತಾನು ಗುರುಮಿಟ್ಕಲ್ ಪಟ್ಟಣದಲ್ಲಿ ಮಾವನವರಾದ ಸುರೇಶ ಇವರ ಕಾರ್ಪೆಂಟರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಗ, ಸಮಯ ಬೆಳಗ್ಗೆ 10:00 ಗಂಟೆ ಸುಮಾರಿಗೆ ಅಜ್ಜಿಯವರಾದ ಬನ್ನಮ್ಮ ಇವರು ತನಗೆ, ಫೋನ್ ಮಾಡಿ ತಿಳಿಸಿದ್ದೇನೆಂದರೆ, ತಾತಳಗೇರ ಗ್ರಾಮದ 1] ಮಲ್ಲಿಕಾರ್ಜುನ ತಂದೆ ಅಡಿವೆಪ್ಪ ಸಾಹುಕಾರ, 2] ನರಸಪ್ಪ ತಂದೆ ಸಾಬಣ್ಣ ಮೋಟಾರ ಜಾ:ಕುರಬರ, ಮತ್ತು ಫಸಪೂಲ ಗ್ರಾಮದ 3] ಮರಲಿಂಗಪ್ಪ ಪೂಜಾರಿ ಮತ್ತು 4] ಮೋನಪ್ಪ ತಂದೆ ರಾಚಪ್ಪ ಬಡಿಗೇರ, ಇವರು ಒಂದು ಕಾರಿನಲ್ಲಿ ಬಂದು "ಲವಿಗೆ" (24 ವರ್ಷ) ಕಾರಿನಲ್ಲಿ ಎತ್ತಾಕಿಕೊಂಡು ಹೋಗಿದ್ದಾರೆ ನೀನು ಬಾ ಅಂತಾ ಕರೆದಿದ್ದರಿಂದ, ಭಯಪಟ್ಟು ತಾನು ತಮ್ಮನಿಗೆ ಪೋನ್ ಮಾಡಿದಾಗ ಆತ ಪೋನ್ ರಿಸಿವ್ ಮಾಡಲಿಲ್ಲ, ನಂತರ ಸಂಜೆ 5:00 ಗಂಟೆ ಸುಮಾರಿಗೆ ನಮ್ಮೂರಿಗೆ ತನ್ನ ಮನೆಯಲ್ಲಿದ್ದ ಅಮ್ಮಳಾದ ರಾಜಮ್ಮ ಮತ್ತು ಅಜ್ಜಿ ಬನ್ನಮ್ಮಳಿಗೆ ವಿಚಾರಿಸಿದಾಗ ನಮ್ಮಮ್ಮಳು ಹೊಲಕ್ಕೆ ಹೋಗಿದ್ದರ ಬಗ್ಗೆ ತಿಳಿಸಿದ್ದು, ಮೇಲ್ಕಂಡ 4 ಜನ ಬಲವಂತವಾಗಿ ಲವಿಗೆ ಹನುಮಾನ ದೇವರ ಗುಡಿಯ ಹತ್ತಿರದಿಂದ ಬಿಳಿ ಬಣ್ಣದ ಕಾರ ನಂ: ಕೆ 33 ಎನ್ 1283 ರಲ್ಲಿ ತಾತಳಗೇರಾ ಗ್ರಾಮದ ಕಡೆಗೆ ಹೋದ ಬಗ್ಗೆ ತಿಳಿಸಿದ್ದು, ನಂತರ ಲವಿಗೆ ಹುಡುಕಾಡಲಾಗಿ ಪತ್ತೆ ಯಾಗದೆ ಇದ್ದುದರಿಂದ ದಿನಾಂಕ:30/12/2023 ರಂದು ದೂರು ಸಲ್ಲಿಸಿದ್ದು ಅವರು ಎಲ್ಲಿಯೋ ಆಕ್ರಮವಾಗಿ ಬಂಧನದಲ್ಲಿರಿಸಿರುತ್ತಾರೆ. ಆದ್ದರಿಂದ ಬಲವಂತವಾಗಿ ಅಪಹರಿಸಿಕೊಂಡು ಹೋದವರ ಮೇಲೆ ಕಾನೂನು ಕ್ರಮ ಜರುಗಿಸಿ ಪತ್ತೆ ಮಾಡಲು ಕೊಟ್ಟ ದೂರಿನ ಸಾರಾಂಶದ ಮೇರೆಗೆ ಗುರುಮಿಟ್ಕಲ್ ಪೊಲೀಸ್ ಠಾಣೆಯಲ್ಲಿ ಮೊ.ಸಂ. 185/2023 ಕಲಂ 365 ರೆ/ವಿ 34 ಐಪಿಸಿ ನೇದ್ದರಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿರುತ್ತದೆ.

ನಂತರ ತನಿಖಾಧಿಕಾರಿಯವರು, ಅದೇ ದಿನ ಸಾಯಂಕಾಲ 05.00 ಗಂಟೆ ಸುಮಾರಿಗೆ ಗುನ್ನೆ ಸ್ಥಳಕ್ಕೆ ಭೇಟಿ ನೀಡಿ ಸಾಕ್ಷಿದಾರರ ಹೇಳಿಕೆ ಪಡೆದುಕೊಳ್ಳಲಾಗಿ ಸಾಕ್ಷಿದಾರರ ಹೇಳಿಕೆಯಿಂದ ದಿನಾಂಕ: 27.12.2023 ರಂದು ಬೆಳಗ್ಗೆ 09.00 ಗಂಟೆಗೆ ಫಸಪೂಲ ಗ್ರಾಮದಲ್ಲಿ ಸಿವಿಲ್ ವ್ಯಾಜ್ಯಕ್ಕೆ ಸಂಬಂದಿಸಿದಂತೆ ಹನುಮಾನ ದೇವಸ್ಥಾನದ ಹತ್ತಿರ ಫಿರ್ಯಾದಿ ಮತ್ತು ಆರೋಪಿತರು ನ್ಯಾಯ ಪಂಚಾಯತಿ ಕೈಕೊಂಡು ಆ ಸಮಯದಲ್ಲಿ ಮಾತಿನ ಚಕಮುಕಿ ಆಗಿರುವುದಾಗಿ ತಿಳಿದು ಬಂದಿರುತ್ತದೆ. ನಂತರ ಆರೋಪಿ ಮಲ್ಲಿಕಾರ್ಜುನ ಸಾಹುಕಾರ ಸಾ: ತಾತಳಗೇರಾ ಈತನು ಲವಿ ತಂದೆ ಮೋನಪ್ಪ ಕಂಬಾರ ಈತನನ್ನು ಕಾರ ನಂಬರ ಕೆಎ-33-ಎನ್-1283 ನೇದ್ದರಲ್ಲಿ ಕರೆದುಕೊಂಡು ಹೋಗಿ ಸಾಯಂಕಾಲ 4.30 ಗಂಟೆಗೆ ಫಿರ್ಯಾದಿ ಲವಿ ಈತನ ಮನೆಯ ಹತ್ತಿರ ಇರುವ ಅಗಸಿಯ ಒಳಗಡೆ ಆರೋಪಿ ಮಲ್ಲಿಕಾರ್ಜುನ ಈತನ ಮಗ ಕರೆದುಕೊಂಡು ಬಂದು ಬಿಟ್ಟು ಹೋಗಿದ್ದು ಈ ಬಗ್ಗೆ ಸಾಕ್ಷ್ಯಾದಾರರಾದ ಚನ್ನಪ್ಪ ತಂದೆ ಬಸ್ಸಣ್ಣ ಅಂಗಡಿ, ಭೀಮರಾಯ ತಂದೆ ಹಣಮಂತ ದುರ್ಗಾದೋರ ಹಾಗೂ ಲವಿ ಈತನ ದೊಡ್ಡಪ್ಪ ಶ್ರೀಶೈಲ@ಸಿರಸಪ್ಪ ತಂದೆ ಬನ್ನಪ್ಪ ಬಡಿಗೇರ ಇವರು ನೋಡಿದ್ದು ಇರುತ್ತದೆ.

ತನಿಖೆಯಲ್ಲಿ ಕಾಣೆಯಾದ ಲವಿ ಈತನ ಮೊಬೈಲ ನಂಬರ 9844550195 ಹಾಗೂ ಈತನ ಅಣ್ಣನ ಮೊಬೈಲ ನಂಬರ 8050962366 ನಂಬರಗಳ ಸಿ.ಡಿ.ಆರ್ ಗಳನ್ನು ಪರಿಶೀಲಿಸಲಾಗಿ, ದಿನಾಂಕ: 27.12.2023 ರಂದು ಫಿರ್ಯಾದಿ ತನ್ನ ತಮ್ಮನನ್ನು ಬೆಳಗ್ಗೆ 10.00 ಗಂಟೆಗೆ ಅಪಹರಿಸಿಕೊಂಡು ಹೋಗಿದ್ದಾಗಿ ತಿಳಿಸಿದ್ದು ಸಮಯ 12.50 ಪಿ.ಎಮ್ ಕ್ಕೆ 23 ಸೆಕಂಡ, ಅದೇ ದಿನ ಸಾಯಾಂಕಾಲ 05.36 ಪಿ.ಎಮ್ ಕ್ಕೆ 50 ಸೆಕೆಂಡ, 5.49 ಪಿ.ಎಮ್ ಕ್ಕೆ 13 ಸೆಕಂಡ ಮೊಬೈಲನಲ್ಲಿ ಮಾತನಾಡಿದ್ದು ಅಲ್ಲದೆ ಅಪಹರಣಕ್ಕೊಳಗಾದ ಲವಿ ಈತನು ಅದೇ ದಿನ 5.31 ಪಿ.ಎಮ್ ಕ್ಕೆ 229 ಸೆಕಂಡ ತನ್ನ ಅಣ್ಣ ಫಿರ್ಯಾದಿ ಕಾಳಪ್ಪ ಈತನೊಂದಿಗೆ ಮಾತನಾಡಿದ್ದು ನಂತರ ಸಮಯ 5.30 ಪಿ.ಎಮ್ ಕ್ಕೆ ಮನೆಯಿಂದ ತನ್ನ ತಾಯಿ ರಾಜಮ್ಮ ಈವಳನ್ನು ತನ್ನ ಮೋಟರ ಸೈಕಲ ಮೇಲೆ ಹಾಗೂ ಫಿರ್ಯಾದಿ ಕಾಳಪ್ಪ ಆತನ ಗೆಳೆಯ ಇನ್ನೊಂದು ಮೋಟರ ಸೈಕಲ ಮೇಲೆ ಮನೆಯಿಂದ ಘಸಪೂಲ ಗೇಟ ಕಡೆ ಹೋದ ಬಗ್ಗೆ ಮನೆಯ ಪಕ್ಕದಲ್ಲಿರುವ ಭೀಮರಾಯ ಆತನ ತಂದೆ ಹಣಮಂತ ಅವರು ನೋಡಿದ್ದರ ಬಗ್ಗೆ ಸಾಕ್ಷಿ ನೀಡಿರುತ್ತಾರೆ ಹಾಗೂ ಸಿ.ಡಿ.ಆರ್ ಅನಾಲೈಸೆಸ್ ನಿಂದ ಸಾಯಂಕಾಲ 4.30 ರಿಂದ 5.15 ರ ರವೆಗೆ ಮನೆಯಲಿ ಹಾಗೂ ಘಸಪೂಲ ಗ್ರಾಮದಲ್ಲಿದ್ದ ಬಗ್ಗೆ ತಿಳಿದು ಬಂದಿರುತ್ತದೆ. ಸಂಜೆ 6.30 ಕ್ಕೆ ಯಾದಗಿರಿ ಕಡೆಗೆ ಹೋಗುವಾಗ ಮುಂಡರಗಿ ನೆಟವರ್ಕ್‌ದಿಂದ ಮೊಬೈಲ್ ಸ್ವಿಚ್ ಆಫ್ ಆಗಿದ್ದ ಬಗ್ಗೆ ತನಿಖೆಯಿಂದ ತಿಳಿದುಬಂದಿರುತ್ತದೆ.

ಸದರಿ ಪ್ರಕರಣದ ಆರೋಪಿತರು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಯಾದಗಿರಿಯಿಂದ ದಿನಾಂಕ: 21.01.2024 ರಂದು ಜಾಮೀನು ಪಡೆದುಕೊಂಡಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ಸಿ.ಡಿ.ಆರ್ ಅನಾಲೈಸೆಸ್ ಮಾಡಿ ತನಿಖೆ ಮಾಡಿದ್ದು ಇರುತ್ತದೆ. ಪ್ರಕರಣದಲ್ಲಿ ಪಿ.ಐ ಗುರುಮಿಟ್ಕಲ್ ಹಾಗೂ ಠಾಣೆಯ ಪಿ.ಎಸ್.ಐ ರವರಾದ ಭೀಮರಾಯ ಮತ್ತು ಸಿದ್ದಲಿಂಗ ಸಿಬ್ಬಂದಿಯವರಾದ ವಿಶ್ವನಾಥರೆಡ್ಡಿ ಸಿ.ಹೆಚ್.ಸಿ-106, ರಹೀಮ್ ಸಿ.ಪಿ.ಸಿ-305, ಅಶೋಕ್ ಸಿ.ಪಿ.ಸಿ-92 ರವರನ್ನು ಅಪಹರಣಕ್ಕೊಳಗಾದ ಮನುಷ್ಯನನ್ನು ಪತ್ತೆ ಹಚ್ಚಲು ಪ್ರಯತ್ನಿಸಲಾಗಿ ಅಪಹರಣಕ್ಕೊಳಗಾದ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ.

ಸದರಿ ತನಿಖೆಯಿಂದ ಸಿವಿಲ್ ವ್ಯಾಜ್ಯಕ್ಕೆ ಸಂಬಂದಿಸಿದಂತೆ ಮಾತುಕತೆ ಕೈಗೊಂಡು ಅಪಹರಣಕ್ಕೊಳಗಾದ ಲವಿ ಈತನನ್ನು ಆರೋಪಿ ಮಲ್ಲಿಕಾರ್ಜುನ ಈತನು ಮಾತುಕತೆ ಕುರಿತು ಬೆಳಗ್ಗೆ 10.30 ಗಂಟೆಗೆ ಕರೆದುಕೊಂಡು ಹೋಗಿದ್ದು ಸಾಯಂಕಾಲ 04.30 ಗಂಟೆಗೆ ವಾಪಸ್ಸು ಪಸಪೂಲ ಅಗಸಿ ಒಳಗಡೆ ತಂದು ಬಿಟ್ಟು ಹೋಗಿದ್ದು ತನಿಖೆಯಿಂದ ಹಾಗೂ ಸಾಕ್ಷ್ಯಾದಾರಗಳಿಂದ ತಿಳಿದು ಬಂದಿರುತ್ತದೆ. ಅಪಹರಣಕ್ಕೊಳಗಾದ ಮನುಷ್ಯನನ್ನು ಪತ್ತೆ ಹಚ್ಚಲು ಪ್ರಯತ್ನಿಸಲಾಗಿ ಅಪಹರಣಕ್ಕೊಳಗಾದ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ.

ಆದಷ್ಟು ಶೀಘ್ರವಾಗಿ ಅಪಹರಣಕ್ಕೊಳಗಾದ ಲವಿ ಈತನನ್ನು ಪತ್ತೆ ಹಚ್ಚಲಾಗುವುದು. ಪ್ರಕರಣವು ಪ್ರಸ್ತುತ ತನಿಖೆಯಲ್ಲಿರುತ್ತದೆ.

**HD 18 PCQ 2024**

ಡಾ: ಜಿ.ಪರಮೇಶ್ವರ
(ಗೃಹ ಸಚಿವರು)

23-2-24